ಪ್ರಕಟಣೆ

ಉಪಾಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀಯುತರುಗಳಾದ ವಾಟಾಳ್ ನಾಗರಾಜ್ ಹಾಗೂ ಸಿ. ಬೈರೇಗೌಡ ಅವರನ್ನು ದಿನಾಂಕ 12-3-1992 ರಂದು 12 ಘಂಟೆ 20 ನಿಮಿಷದಲ್ಲಿ ವಿಧಾನಸೌಧದ ಮುಂದೆ ಬಂಧಿಸಿ ಅದೇ ದಿನ 14 ಘಂಟೆಗೆ ಬಿಡುಗಡೆ ಮಾಡಲಾಯಿತೆಂದು ಸಬ್-ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನಸೌಧ ಠಾಣೆ, ಬೆಂಗಳೂರು ಇವರಿಂದ ನಮಗೆ ಸಂದೇಶ ಬಂದಿದೆ.

ಸದನದ ಕಾರ್ಯಕಲಾಪಗಳಲ್ಲಿ ವಿರೋದ ಪಕ್ಷದವರು ಭಾಗವಹಿಸಲು ಮನವಿ

† ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೆ. ಈಗ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡುತ್ತಿದ್ದೇವೆ. ನಮ್ಮನ್ನು ಕರೆದಿದ್ದೀರಿ. ನಾನು ಸರ್ಕಾರಕ್ಕೆ ಒಂದು ವಿನಂತಿ ಮಾಡುತ್ತೇನೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದವರೂ ಇದ್ದು ಚೆನ್ನಾಗಿ ನಡೆದರೆ ಬಹಳ ಚೆನ್ನಾಗಿರುತ್ತದೆ. ಕಳೆದ ವಾರ ಸರ್ಕಾರಕ್ಕೆ ಎಲ್ಲಾ ವಿನಂತಿ ಮಾಡಿಕೊಂಡೆವು. ಸರ್ಕಾರ ಸಹ ಎಲ್ಲ ಸದಸ್ಯರ ಮಾತಿಗೆ ಬೆಲೆ ಕೊಟ್ಟು ವಿರೋಧ ಪಕ್ಷದವರನ್ನು ಪದೇ ಪದೇ ವಿನಂತಿ ಮಾಡಿಕೊಂಡಿದ್ದು ಆಯಿತು. ಮಾನ್ಯ ಮುಖ್ಯಮಂತ್ರಿಯವರ ಬಜೆಟ್ ಭಾಷಣದ ಮೇಲೆ ತಾವು ಮಾತನಾಡಿ ಎಂದಾಗ ಅವರು ಕಿವಿಗೂಡಲಿಲ್ಲ. ಅದೆಲ್ಲ ಮುಗಿಯಿತು. ಅವರೂ ಕೂಡ 3 ದಿವಸ ಬಿಸಿಲಿನಲ್ಲಿ ಕುಳಿತು ಬಿಸಿಲಿನ ಝಳವನ್ನು ಅನುಭವಿಸಿ ರಾಜ್ಯದ ಜನತೆ ಏನೇನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೂ ಕೂಡ ಅರ್ಥವಾಗಿದೆ ಎಂದು ನಾನಾದರೂ ಭಾವನೆ ಮಾಡುತ್ತೇನೆ. ಈಗ ಅವರು ಹೊರಗಡೆ ಕುಳಿತಿದ್ದಾರೆ. ನಾನೂ ಕೂಡ ವಿರೋಧಪಕ್ಷದ ಮುಖಂಡರನ್ನು ಭೇಟಿ ಮಾಡಿ ಬಂದೆ. ಅವರಲ್ಲೂ ಕೂಡ ಈಗಾಗಲೇ ಮೊನ್ನೆ ಇದ್ದಂತಹ ಬಿರುಸು ಇನ್ನೂ ಕಡಿಮೆಯಾಗಿ ನಾವೂ ಚರ್ಚೆಯಲ್ಲಿ ಭಾಗವಹಿಸಿದ್ದರೆ ಸರಿಯಿತ್ತೋ ಏನೋ ಎನ್ನುವ ಅನಿಸಿಕೆ ಕೆಲವರಲ್ಲಿ ಮೂಡುತ್ತಿದೆ. ಅದಕ್ಕೇ ನಾನು ವಿನಂತಿ ಮಾಡುತ್ತೇನೆ. ಬೇಡಿಕೆ ಇನ್ನೂ ಪ್ರಾರಂಭ ಆಗಿಲ್ಲ. ಮೊದಲು ಪ್ರಾರಂಭ ಆದಾಗ ಇದಿನಬ್ಬನವರಿಂದ ಸ್ಟಾರ್ಟ್ ಮಾಡಿಸಿದಿರಿ ಎನ್ನುವ ಒಂದೇ ಒಂದು ಸಣ್ಣ ಕಾರಣಕ್ಕೋಸ್ಕರ ಅವರು ಆ ನಿಲುವು ತಳೆದರು. ಈ ದಿನ ಬೇಡಿಕೆಗಳು ಪ್ರಾರಂಭವಾಗುತ್ತಿದೆ. ಈ ಸಂದರ್ಭದಲ್ಲಿ ತಾವು ತಮ್ಮ ಕೊಠಡಿಗೆ ಅವರನ್ನು ಕರೆದು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. ವಿರೋಧ ಪಕ್ಷದವರು ಸದನದ ಒಳಗೆ ಬಂದು ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಸಲಹೆ ಮಾಡಿದರೆ ಸರ್ಕಾರಕ್ಕೂ ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮತ್ತೊಂದು ಅವಕಾಶವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅವರನ್ನು ತಾವು ತಮ್ಮ ಕೊಠಡಿಯಲ್ಲಿ ಕರೆಸಿ ಚರ್ಚೆ ಮಾಡಬೇಕು. ಅಲ್ಲಿಯವರೆಗೆ ಈ ಸದನವನ್ನು ಮುಂದೂಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳನ್ನೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಕೆ. ಆನಂತಕೃಷ್ಣ : ಮಾನ್ಯ ಉಪಾಧ್ಯಕ್ಷೆಣಿಯವರೆ. ಮಾನ್ಯ ಶಿವರಾಮೇಗೌಡರು ಏನು ಹೇಳುತ್ತಿದ್ದಾರೆ ಅದು ಉಚಿತವಾಗಿದೆ ಎಂದು ಕಾಣುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅವರನ್ನು ಭೇಟಿ ಮಾಡಿ ಬಂದಿದ್ದಾರೆ. ಮತ್ತೆ ತಾವೂ ಕೂಡ ಭೇಟಿ ಮಾಡಿದ್ದೀರಿ. ಅವರನ್ನು ತಮ್ಮ ಕೊಠಡಿಗೆ ಬರಮಾಡಿಕೊಂಡು ಈ ಚರ್ಚೆಗೆ ಅವಕಾಶ ಮಾಡಿಕೊಡುವುದು ಸೂಕ್ತ. ಅದಕ್ಕಾಗಿ ಈ ಸಭೆಯನ್ನು ಸ್ವಲ್ಪ ಕಾಲ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈ ಬಗ್ಗೆ ನಾನೂ ಸಹ ಬೆಳಿಗ್ಗೆ ಹೋಗಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರರನ್ನು ಭೇಟಿ ಮಾಡಿ ಬಂದಿದ್ದೇನೆ. ಅವರೂ ಸಹ ಬಂದು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಾದರೆ ಇದು ಅರ್ಥಪೂರ್ಣವಾಗುತ್ತದೆನ್ನುವ ದೃಷ್ಟಿಯಿಂದ ಎಲ್ಲರೂ ಸಹ ಇದೇ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತ ಮಾಡಿದ್ದೀರಿ. ಆದ್ದರಿಂದ ಈಗ ಸಭೆ ಮುಂದೂಡಲ್ಪಟ್ಟು ಮತ್ತೆ ಎರಡೂವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಪುನಃ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ 40-ಜಿಲ್ಲಾಡಳಿತ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮಾಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36.90.68.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು:

ಅಭಿಯಾಚನೆ ಕ್ರಮಾಂಕ 48-ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71.20.21.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.01.84.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು:

ಅಭಿಯಾಚನೆ ಕ್ರಮಾಂಕ 49-ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8.31.90.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ